# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1051 |
| 2 | ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು |
| 3 | ಉತ್ತರಿಸಬೇಕಾದ ದಿನಾಂಕ | 16-12-2025 |
| 4 | ಉತ್ತರಿಸುವವರು | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |
| **ಕ್ರಸಂ** | **ಪ್ರಶ್ನೆ** | **ಉತ್ತರ** |
| ಅ. | ಮೈಸೂರು ಪರಂಪರೆಗೆ ಅನುಗುಣವಾಗಿ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದಲ್ಲಿ ಉತ್ಪಾದನೆಯಾಗುವ ರೇಷ್ಮೆ ಸೀರೆಗಳಿಗೆ ಹೆಚ್ಚು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ನಿಗಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳೇನು; | ಸರ್ಕಾರದ ಗಮನಕ್ಕೆ ಬಂದಿದೆ,<br><br>ಕೆ.ಎಸ್.ಐ.ಸಿ. ನಿಗಮದ ಉತ್ಪನ್ನಗಳು ಗುಣಮಟ್ಟದಲ್ಲಿ ತನ್ನದೇ ಆದ ವೈಶಿಷ್ಟ್ಯತೆ ಹೊಂದಿರುವುದರಿಂದ ದಿನೇ ದಿನೇ ಬೇಡಿಕೆ ಹೆಚ್ಚಾಗುತ್ತಲಿದ್ದು ಈ ಸಂಬಂಧ ಈಗಾಗಲೇ ರೇಷ್ಮೆ ನೇಯ್ಗೆ ಕಾರ್ಖಾನೆ- ಮೈಸೂರು ಹಾಗೂ ರೇಷ್ಮೆ ನೇಯ್ಗೆ ಘಟಕ-ಚನ್ನಪಟ್ಟಣ ಇಲ್ಲಿ ಹೆಚ್ಚುವರಿಯಾಗಿ ಜೆಕಾರ್ಡ್ ಯಂತ್ರಗಳನ್ನು ಅಳವಡಿಸಿದ್ದು ಹಾಗೂ ರೇಷ್ಮೆ ನೂಲು ತೆಗೆಯುವ ಘಟಕ- ತಿ.ನರಸೀಪುರ ಇಲ್ಲಿಗೆ 04 (ನಾಲ್ಕು) ಸ್ವಯಂಚಾಲಿತ ರೀಲಿಂಗ್ ಯಂತ್ರಗಳಿಗೆ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಪ್ರಸ್ತುತ ಸ್ವಯಂಚಾಲಿತ ರೀಲಿಂಗ್ ಯಂತ್ರಗಳನ್ನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಗ್ರಾಹಕರ ಬೇಡಿಕೆಯನುಸಾರ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಎಲ್ಲಾ ಸೂಕ್ತ ಕ್ರಮವಹಿಸಲಾಗುತ್ತಿದೆ. |
| ಆ. | ಕರ್ನಾಟಕ ರೇಷ್ಮೆ ಉದ್ಯಮ ನಿಗಮ ರಾಜ್ಯದಲ್ಲಿ ಎಷ್ಟು ಶಾಖೆಗಳನ್ನು ಹೊಂದಿರುತ್ತದೆ; ಪ್ರತಿ ವರ್ಷ ಈ ನಿಗಮ ಉತ್ಪಾದನೆ ಮಾಡುತ್ತಿರುವ ರೇಷ್ಮೆ ಸೀರೆಗಳ ಸಂಖ್ಯೆ ಎಷ್ಟು; ಬೇಡಿಕೆ ಇರುವ ಸಂಖ್ಯೆ ಎಷ್ಟು? | ಕರ್ನಾಟಕ ರೇಷ್ಮೆ ಉದ್ಯಮ ನಿಗಮಗಳ ನಿಯಮಿತದ ಉತ್ಪಾದನಾ ಘಟಕಗಳು ಈ ಕೆಳಗೆ ತಿಳಿಸಿದ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಲಿವೆ:<br><br>1. ರೇಷ್ಮೆ ನೇಯ್ಗೆ ಕಾರ್ಖಾನೆ (ಘಟಕ 1 ಮತ್ತು ಘಟಕ-2) - ಮೈಸೂರು ಮತ್ತು ರೇಷ್ಮೆ ನೇಯ್ಗೆ ಘಟಕ -ಚನ್ನಪಟ್ಟಣ ಘಟಕಗಳಲ್ಲಿ ಮೈಸೂರ್ ಸಿಲ್ಕ್ ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ.<br><br>2. ರೇಷ್ಮೆ ನೂಲು ತೆಗೆಯುವ ಘಟಕ, ತಿ.ನರಸೀಪುರ ಇಲ್ಲಿ ಕಚ್ಚಾ ರೇಷ್ಮೆ ದಾರವನ್ನು ಉತ್ಪಾದಿಸಲಾಗುತ್ತಿದೆ.<br><br>ಗ್ರಾಹಕರ ಬೇಡಿಕೆಯನುಸಾರ ವರ್ಷದಿಂದ ವರ್ಷಕ್ಕೆ ಉತ್ಪಾದನಾ ಗುರಿ ಹೆಚ್ಚಿಸಲಾಗುತ್ತಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ: |

| ವರ್ಷ | ಉತ್ಪಾದನೆ ಮೀಟರ್ ಗಳಲ್ಲಿ | ಉತ್ಪಾದನೆಯಾಗುವ ಸೀರೆಗಳ ಸಂಖ್ಯೆ | ಮಾರಾಟವಾದ ಸೀರೆಗಳು | ಗಳಿಸಿದ ಲಾಭ ಕೋಟಿಗಳಲ್ಲಿ (ತೆರಿಗೆಯ ನಂತರ) |
|---|---|---|---|---|
| 2020-21 | 332802 | 60509.45 | 61019 | 27.73 |
| 2021-22 | 423662.5 | 77029.55 | 78737 | 31.64 |
| 2022-23 | 541643.78 | 98480.69 | 98277 | 46.75 |

<table>
<tr><td></td><td></td><td>
<table>
<tr><td>2023-24</td><td>544756.70</td><td>99046.67</td><td>108035</td><td>73.40</td></tr>
<tr><td>2024-25</td><td>570088.56</td><td>103652.5</td><td>103347</td><td>101.15</td></tr>
</table>
ಈ ನಿಗಮದಲ್ಲಿ ಉತ್ಪಾದನೆ ಮಾಡುತ್ತಿರುವ ಮೈಸೂರ್ ಸಿಲ್ಕ್ ಸೀರೆಗಳಿಗೆ ವರ್ಷಕ್ಕೆ ಸುಮಾರು 12,000 ಸೀರೆಗಳಿಗೆ ಬೇಡಿಕೆ ಇರುತ್ತದೆ.
</td></tr>
<tr><td>ಇ.</td><td>ಕೆ.ಎಸ್.ಐ.ಸಿ. ತನ್ನ ಮಾರುಕಟ್ಟೆ ವಿಸ್ತಾರಗೊಳಿಸಲು ಕೈಗೊಂಡಿರುವ ಯೋಜನೆಗಳೇನು; ಕೇವಲ ಕರ್ನಾಟಕಕ್ಕೆ ಸೀಮಿತವಾಗದೆ ರಾಷ್ಟ್ರಮಟ್ಟದಲ್ಲಿ ಕೆಎಸ್ಐಸಿ ಮಾರಾಟ ಮಳಿಗೆಗಳನ್ನು ತೆರೆಯಲು ಮತ್ತು ರೇಷ್ಮೆ ಸೀರೆ ಉತ್ಪಾದನೆಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;</td><td>ಕೆ.ಎಸ್.ಐ.ಸಿ.ಯು ತನ್ನ ಮಾರುಕಟ್ಟೆಯನ್ನು ವಿಸ್ತಾರಗೊಳಿಸಲು ನೂತನವಾಗಿ ಮೈಸೂರ್ ಸಿಲ್ಕ್ ಸೀರೆಗಳಲ್ಲಿ ನೂತನ ವಿನ್ಯಾಸದ ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ.<br><br>ಮುಂದುವರಿದು ಇತ್ತೀಚೆಗೆ ದುಬೈ ದೇಶದಲ್ಲಿ ದಿನಾಂಕ:09.11.2025 ರಂದು ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯೋತ್ಸವ-2025 ರ ಮತ್ತು ಜಾಗತಿಕ ವ್ಯಾಪಾರ ವೇದಿಕೆ ಅನಾವರಣ ಕಾರ್ಯಕ್ರಮದಲ್ಲಿ ಸರ್ಕಾರದ ಮತ್ತು ನಿಗಮದ ಅಧಿಕಾರಿಗಳು ಭಾಗವಹಿಸಿದ್ದು, ಸದರಿ ಕಾರ್ಯಕ್ರಮದಲ್ಲಿ ಮೈಸೂರ್ ಸಿಲ್ಕ್ ಸೀರೆಗಳ ಪ್ರದರ್ಶನ ಮತ್ತು ಮಾರಾಟವನ್ನು ಹಮ್ಮಿಕೊಳ್ಳಲಾಗಿತ್ತು<br><br>ಅಲ್ಲದೇ, ಮೈಸೂರ್ ಸಿಲ್ಕ್ ಸೀರೆಗಳ ಮಾರುಕಟ್ಟೆಯನ್ನು ವಿಸ್ತಾರಗೊಳಿಸಲು ದಿನಾಂಕ:11.11.2025 ರಂದು ಮೆ|| ವಿಟಿಪಿಸಿ ಮತ್ತು ಕಲಾಲೋಕ ಏರ್‌ಪೋರ್ಟ್ ಆವರಣದಲ್ಲಿ ಹೊಸದಾಗಿ ಕೆ.ಎಸ್ .ಐ.ಸಿ ಮಾರಾಟ ಮಳಿಗೆಯನ್ನು ಪ್ರಾರಂಭಿಸಲಾಗಿರುತ್ತದೆ.<br><br>ಮುಂದುವರೆದು, ಅಂತರಾಷ್ಟ್ರೀಯ ಮಟ್ಟದ ಗ್ರಾಹಕರಿಗೆ ರೇಷ್ಮೆ ಸೀರೆಗಳನ್ನು ಮಾರಾಟ ಮಾಡಲು ಆನ್‌ಲೈನ್ ಮಾರಾಟವನ್ನು ಸಹ ನಡೆಸಲಾಗುತ್ತಿದೆ.</td></tr>
<tr><td>ಈ.</td><td>ಮೈಸೂರು ರೇಷ್ಮೆ ಸೀರೆ ಹೆಸರಿನಲ್ಲಿ ನಕಲಿ ಕಂಪನಿಗಳು ನಕಲಿ ರೇಷ್ಮೆ ಸೀರೆ ಮಾರಾಟಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು; ಇಲ್ಲಿಯವರೆಗೆ ಎಷ್ಟು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ;</td><td>ಸರ್ಕಾರದ ಗಮನಕ್ಕೆ ಬಂದಿದೆ.<br><br>ಮೆ|| ಕರ್ನಾಟಕ ಸಿಲ್ಕ್ ಇಂಟರ್‌ನ್ಯಾಷನಲ್, ಮೇಯೋಹಾಲ್, ಬೆಂಗಳೂರು ಇವರು ನಕಲಿ ಮೈಸೂರ್ ರೇಷ್ಮೆ ಸೀರೆಯ ಹೆಸರಿನಲ್ಲಿ ನಕಲಿ ರೇಷ್ಮೆ ಸೀರೆಗಳ ಮಾರಾಟ ಮಾಡುತ್ತಿದ್ದರಿಂದ ಈ ಅಂಗಡಿಯವರ ಮೇಲೆ ಹಲಸೂರು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರಿಂದ, ಸದರಿ ಪೋಲೀಸ್ ಠಾಣೆಯವರು ಈ ಬಗ್ಗೆ ಸದರಿ ಅಂಗಡಿಯಲ್ಲಿ ತಪಾಸಣೆ ಮಾಡಿ ಮೈಸೂರ್ ಸಿಲ್ಕ್ ಸೀರೆಗಳೆಂದು ನಕಲಿ ರೇಷ್ಮೆ ಸೀರೆ ಮಾರಾಟ ಮಾಡುತ್ತಿರುವುದು ಧೃಡಪಟ್ಟಿದ್ದರಿಂದ, ಈ ಅಂಗಡಿಯ ವಿರುದ್ಧ XXIXನೇ ಅಡಿಷನಲ್ ಚೀಫ್ ಜೂಡಿಷಿಯಲ್ ಮ್ಯಾಜಿಸ್ಟ್ರೇಟ್, ಮೇಯೋಹಾಲ್, ಬೆಂಗಳೂರು ಇಲ್ಲಿ ಪ್ರಕರಣ ಸಂಖ್ಯೆ:25209/2010 ದಾಖಲಿಸಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲಿ ಇನ್ನೂ ಬಾಕಿ ಇರುತ್ತದೆ.</td></tr>
<tr><td>ಉ</td><td>ಶುದ್ಧ ಚಿನ್ನದ ಜರಿಯೊಂದಿಗೆ ಸಾಂಪ್ರದಾಯಿಕ ಶೈಲಿಯಲ್ಲಿ ಮೈಸೂರು ಮತ್ತು ಕರ್ನಾಟಕದಲ್ಲಿ ಉತ್ಪಾದನೆಗೊಳ್ಳುವ ಮೈಸೂರು ರೇಷ್ಮೆ ಸೀರೆಗಳನ್ನು ರಾಜ್ಯದ ಮತ್ತು ರಾಷ್ಟ್ರದ</td><td>ಕರ್ನಾಟಕ ರೇಷ್ಮೆ ಉದ್ಯಮ ನಿಗಮಗಳ ನಿಯಮಿತದ ಉತ್ಪಾದನಾ ಘಟಕಗಳು 1.ರೇಷ್ಮೆ ನೇಯ್ಗೆ ಕಾರ್ಖಾನೆ (ಘಟಕ 1 ಮತ್ತು ಘಟಕ-2) - ಮೈಸೂರು ಮತ್ತು ರೇಷ್ಮೆ ನೇಯ್ಗೆ ಘಟಕ -ಚನ್ನಪಟ್ಟಣ ಘಟಕಗಳಲ್ಲಿ ಶುದ್ಧ ರೇಷ್ಮೆ ಜರಿ ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ ಮತ್ತು ರೇಷ್ಮೆ ನೂಲು ತೆಗೆಯುವ ಘಟಕ, ತಿ.ನರಸೀಪುರ ಇಲ್ಲಿ ರೇಷ್ಮೆ ದಾರವನ್ನು ಉತ್ಪಾದಿಸಲಾಗುತ್ತಿದೆ.<br><br>ಕೆ.ಎಸ್.ಐ.ಸಿ ಘಟಕಗಳಲ್ಲಿ ಶುದ್ಧ ಚಿನ್ನದ ಜರಿಯೊಂದಿಗೆ ಸಾಂಪ್ರದಾಯಿಕ ಶೈಲಿಯಲ್ಲಿ ಗ್ರಾಹಕರ ಬೇಡಿಕೆಯನುಸಾರ ಹೊಸ</td></tr>
</table>

| | | |
|---|---|---|
| | ಮೂಲೆ ಮೂಲೆಗೂ ತಲುಪಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳುತ್ತದೆ; ಕಾಲಮಿತಿಯೊಳಗೆ ಅದನ್ನು ಜಾರಿಗೊಳಿಸುತ್ತದೆಯೇ? | ಹೊಸ ವಿನ್ಯಾಸಗಳ ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ.<br><br>ಮೈಸೂರ್ ಸಿಲ್ಕ್ ಸೀರೆಗಳ ಮಾರಾಟವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸುವ ನಿಟ್ಟಿನಲ್ಲಿ ಇತ್ತೀಚೆಗೆ ದುಬೈ ದೇಶದಲ್ಲಿ ದಿನಾಂಕ:09.11.2025 ರಂದು ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯೋತ್ಸವ-2025 ರ ಮತ್ತು ಜಾಗತಿಕ ವ್ಯಾಪಾರ ವೇದಿಕೆ ಅನಾವರಣ ಕಾರ್ಯಕ್ರಮದಲ್ಲಿ ಸರ್ಕಾರದ ಮತ್ತು ನಿಗಮದ ಅಧಿಕಾರಿಗಳು ಭಾಗವಹಿಸಿದ್ದು, ಸದರಿ ಕಾರ್ಯಕ್ರಮದಲ್ಲಿ ಮೈಸೂರ್ ಸಿಲ್ಕ್ ಸೀರೆಗಳ ಪ್ರದರ್ಶನ ಮತ್ತು ಮಾರಾಟವನ್ನು ಹಮ್ಮಿಕೊಳ್ಳಲಾಗಿತ್ತು.<br><br>ಮುಂದುವರಿದು, ಮೈಸೂರ್ ಸಿಲ್ಕ್ ಸೀರೆಗಳ ಮಾರುಕಟ್ಟೆಯನ್ನು ವಿಸ್ತಾರಗೊಳಿಸಲು ದಿನಾಂಕ: 11.11.2025ರಂದು ಮೆ\|\| ವಿಟಿಪಿಸಿ ಮತ್ತು ಕಲಾಲೋಕ ಏರ್‌ಪೋರ್ಟ್ ಆವರಣದಲ್ಲಿ ಹೊಸದಾಗಿ ಕೆಎಸ್‌ಐಸಿ ಮಾರಾಟ ಮಳಿಗೆಯನ್ನು ಪ್ರಾರಂಭಿಸಲಾಗಿದ್ದು, ಈ ಮಾರಾಟ ಮಳಿಗೆಯಲ್ಲಿ ಉತ್ತಮ ವ್ಯಾಪಾರ ವಹಿವಾಟು ಆಗುತ್ತಲಿದೆ.<br><br>ಅಂತರಾಷ್ಟ್ರೀಯ ಮಟ್ಟದ ಗ್ರಾಹಕರಿಗೆ ಅವರ ಬೇಡಿಕೆಗೆ ಅನುಗುಣವಾಗಿ ರೇಷ್ಮೆ ಸೀರೆಗಳನ್ನು ಮಾರಾಟ ಮಾಡಲಾಗುತ್ತಿದ್ದು, ಇದರಿಂದ ವರ್ಷದಿಂದ ವರ್ಷಕ್ಕೆ ಮೈಸೂರ್ ಸಿಲ್ಕ್ ಸೀರೆಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದರಿಂದ ಗ್ರಾಹಕರ ಬೇಡಿಕೆಗೆ ಅನುಸಾರವಾಗಿ ಆನ್‌ಲೈನ್ ಮಾರಾಟದ ಮೂಲಕ ಅಂತರಾಷ್ಟ್ರೀಯ ಮಟ್ಟದ ಗ್ರಾಹಕ ಬೇಡಿಕೆಯನ್ನು ಪೂರೈಸಲಾಗುತ್ತಿದೆ. |

ಸಂಖ್ಯೆ: ರೇಷ್ಮೆ 424 ರೇಇವಿ 2025

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು